# ನಿಮ್ಮೊಡನೆ

## ಡೆಂಗಿ ಸಾಂಕ್ರಾಮಿಕ: ಎಚ್ಚರಿಕೆ ನೀಡಿದರೆ ಸಾಲದು ಸಾರ್ವಜನಿಕ ಹಿತರಕ್ಷಣೆಯ ಬಾಧ್ಯತೆಯೂ ಬೇಕು

**ಸರ್ಕಾರದ ಅಂಗಸಂಸ್ಥೆಗಳು ನಾಗರಿಕ ಉತ್ತರದಾಯಿತ್ವದ ಬಾಧ್ಯತೆ ಮರೆತಿವೆ. ರಸ್ತೆಗಳಲ್ಲಿ ಮಳೆ ನೀರು ನಿಲ್ಲುತ್ತಿದ್ದರೆ ಅದರ ಹೊಣೆ ಯಾರದೆನ್ನುವುದರ ಬಗ್ಗೆ ಯಾರೂ ಯೋಚಿಸುವುದಿಲ್ಲ. ಚರಂಡಿ ಹಾಗೂ ಮೋರಿಗಳನ್ನು ಸುವ್ಯವಸ್ಥೆಯಲ್ಲಿಡಲು ವಿಫಲವಾಗಿರುವ ಆಡಳಿತವೂ ಸೊಳ್ಳೆಗಳ ರೂಪದಲ್ಲಿ ನಾಗರಿಕರನ್ನು ಕಾಡುತ್ತದೆ**

ಮುಂಗಾರು ತೀವ್ರಗೊಂಡಂತೆಲ್ಲ ತನ್ನ ತೀವ್ರತೆಯನ್ನೂ ಹೆಚ್ಚಿಸಿಕೊಳ್ಳುತ್ತಿದ್ದ ಡೆಂಗಿ ಜ್ವರ ಈ ಬಾರಿ ಬೇಸಿಗೆಯಲ್ಲಿಯೇ ಕಾಣಿಸಿಕೊಂಡಿದೆ. ಮಾರ್ಚ್ ಹಾಗೂ ಏಪ್ರಿಲ್ ತಿಂಗಳಲ್ಲಿ ರಾಜ್ಯದ ಕೆಲವು ಭಾಗಗಳಲ್ಲಿ ಬಿದ್ದಿರುವ ಮಳೆ ಡೆಂಗಿ ಪ್ರಕರಣಗಳ ಅಕಾಲಿಕ ಹೆಚ್ಚಳಕ್ಕೆ ಕಾರಣವಾಗಿದೆ. ಏಪ್ರಿಲ್ ತಿಂಗಳಲ್ಲಿಯೇ ಡೆಂಗಿ ಜ್ವರದ ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ಜೂನ್ ಮತ್ತು ಜುಲೈ ಡೆಂಗಿ ಉಲ್ಬಣಗೊಳ್ಳುವ ಕಾಲ. ಈ ಬಾರಿ ಏಪ್ರಿಲ್‌ನಲ್ಲಿಯೇ ಡೆಂಗಿ ಪ್ರಕರಣಗಳು ಕಾಣಿಸಿಕೊಳ್ಳತೊಡಗಿವೆ. ಮುಂಗಾರು ಪೂರ್ವ ಮಳೆಯ ಈ ವಿದ್ಯಮಾನ ಅನಿರೀಕ್ಷಿತವೂ ಅಲ್ಲ, ಅಚ್ಚರಿಯ ಸಂಗತಿಯೂ ಅಲ್ಲ. ಮಳೆಯಿಂದಾಗಿ ಸೊಳ್ಳೆಗಳ ಸಂತಾನೋತ್ಪತ್ತಿಗೆ ಅನುಕೂಲಕರ ವಾತಾವರಣ ರೂಪುಗೊಂಡು, ಡೆಂಗಿ ಪ್ರಕರಣಗಳಲ್ಲೂ ಹೆಚ್ಚಳವಾಗಿದೆ. ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಕರಣಗಳು ವರದಿಯಾಗಿವೆ. ಹತ್ತೊಂಬತ್ತು ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ ಎರಡಂಕಿ ದಾಟಿದೆ.

ಡೆಂಗಿ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ಆರೋಗ್ಯ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ನಿವೇಶನ, ಕಟ್ಟಡ, ನೀರಿನ ಟ್ಯಾಂಕ್, ಉದ್ಯಾನ, ಆಟದ ಮೈದಾನ ಸೇರಿ ವಿವಿಧೆಡೆ ಸೊಳ್ಳೆಗಳ ಸಂತಾನೋತ್ಪತ್ತಿ ತಡೆಗೆ ಸಾರ್ವಜನಿಕರು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ನೀರಿನ ಸಂಗ್ರಹದ ಪಾತ್ರೆಗಳು, ಸಂಪ್‌ಗಳು ಮತ್ತು ಓವರ್‌ಹೆಡ್ ಟ್ಯಾಂಕ್‌ಗಳನ್ನು ಸುರಕ್ಷಿತವಾಗಿ ಮುಚ್ಚಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಇಲಾಖೆ ಹೇಳಿದೆ. ಆದರೆ, ಮುನ್ನೆಚ್ಚರಿಕೆ ನೀಡುವಷ್ಟಕ್ಕೆ ಆರೋಗ್ಯ ಇಲಾಖೆಯ ಕೆಲಸ ಮುಗಿದುಹೋಗದು.

ಡೆಂಗಿ ಜ್ವರವನ್ನು ಸಾಂಕ್ರಾಮಿಕ ಕಾಯಿಲೆ ಎಂದು ಘೋಷಿಸಲಾಗಿದೆ. ವಿಶ್ವದ ಮೂರನೇ ಒಂದರಷ್ಟು ಡೆಂಗಿ ಪ್ರಕರಣಗಳು ಭಾರತದಲ್ಲಿ ವರದಿಯಾಗುತ್ತಿವೆ. ಮಳೆಗಾಲದ ಬೆಂಗಳೂರು 'ಡೆಂಗಿನಗರಿ'ಯ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ. ಡೆಂಗಿಗೆ ನಿರ್ದಿಷ್ಟ ಔಷಧಿ ಇಲ್ಲದಿದ್ದರೂ, ರೋಗ ಲಕ್ಷಣಗಳಿಗೆ ಅನುಸಾರವಾಗಿ ಚಿಕಿತ್ಸೆ ನೀಡಲಾಗುತ್ತದೆ. ದೇಹ ನಿರ್ಜಲೀಕರಣಗೊಳ್ಳದಂತೆ ಎಚ್ಚರಿಕೆ ವಹಿಸುವುದು ಚಿಕಿತ್ಸೆಯ ಪ್ರಮುಖ ಭಾಗ. ಅಪರೂಪದ ಸನ್ನಿವೇಶಗಳಲ್ಲಷ್ಟೇ ಡೆಂಗಿ ಮಾರಣಾಂತಿಕ. ಆದರೆ, ಡೆಂಗಿ ಚಿಕಿತ್ಸೆಯನ್ನು ಖಾಸಗಿ ಆಸ್ಪತ್ರೆಗಳು ಹಣ ಗಳಿಕೆಯ ದಂಧೆಯನ್ನಾಗಿಸಿವೆ. ರಕ್ತಪರೀಕ್ಷೆಯ ಶುಲ್ಕಗಳು ಏಕರೂಪದಲ್ಲಿಲ್ಲ. ಪ್ರತಿ ವರ್ಷವೂ ಕಾಣಿಸಿಕೊಳ್ಳುವ ಸಾಂಕ್ರಾಮಿಕ ಕಾಯಿಲೆಯ ಚಿಕಿತ್ಸೆಗೆ ಏಕರೂಪದ ದರವನ್ನು ಸರ್ಕಾರ ನಿಗದಿಪಡಿಸದೆ ಹೋದರೆ, ಔಷಧೋಪಚಾರದ ಹೆಸರಿನಲ್ಲಿ ಅಮಾಯಕರ ಸುಲಿಗೆ ನಡೆಯುತ್ತದೆ. ಡೆಂಗಿ ಬಾಧಿತರು ಆಸ್ಪತ್ರೆಗಳ ವೆಚ್ಚ ಭರಿಸಲು ಒದ್ದಾಡದಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆಗಾರಿಕೆ.

ಆರೋಗ್ಯ ಇಲಾಖೆಯ ಜೊತೆಗೆ ಸ್ಥಳೀಯ ಆಡಳಿತ ಸಂಸ್ಥೆಗಳು ಡೆಂಗಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಸೊಳ್ಳೆಗಳ ನಿಯಂತ್ರಣಕ್ಕೆ ಕಡಿವಾಣ ಹಾಕಿದರೆ ರೋಗವೂ ತಹಬಂದಿಗೆ ಬರುತ್ತದೆ. ಆದರೆ, ಮುನ್ನೆಚ್ಚರಿಕೆ ಕ್ರಮಗಳ ಪ್ರಕಟಣೆಗಷ್ಟೇ ತಮ್ಮ ಜವಾಬ್ದಾರಿಯನ್ನು ಸ್ಥಳೀಯ ಆಡಳಿತ ಸೀಮಿತಗೊಳಿಸಿಕೊಂಡಿರುತ್ತದೆ. ಬೆಂಗಳೂರು ಮಹಾನಗರ ಪಾಲಿಕೆಯ ಉದಾಹರಣೆ ಗಮನಿಸಿ. ರಾಜಧಾನಿಯಲ್ಲಿ ಕಳೆದ ವರ್ಷ 32 ಸಾವಿರಕ್ಕೂ ಹೆಚ್ಚಿನ ಡೆಂಗಿ ಪ್ರಕರಣಗಳು ದಾಖಲಾಗಿದ್ದವು. 16 ಮಂದಿ ಸಾವೀಗೀಡಾಗಿದ್ದರು. ಕಳೆದ ಐದು ವರ್ಷಗಳ ಅಂಕಿಅಂಶ ಗಮನಿಸಿದರೆ ಡೆಂಗಿ ಪ್ರಕರಣಗಳ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಲೇ ಇದೆ. 2021ರಲ್ಲಿ 7 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದವು. ಡೆಂಗಿ ಪ್ರಕರಣಗಳು ಕಳವಳಕಾರಿ ಪ್ರಮಾಣದಲ್ಲಿ ಹೆಚ್ಚುತ್ತಿದ್ದರೂ 'ಬಿಬಿಎಂಪಿ' ಬಳಿ ಡೆಂಗಿ ನಿಯಂತ್ರಣಕ್ಕೆ ಪರಿಣಾಮಕಾರಿ ಕ್ರಿಯಾಯೋಜನೆಯಿಲ್ಲ; ಸೊಳ್ಳೆಗಳ ನಿಯಂತ್ರಣಕ್ಕೆ ಗಂಭೀರ ಪ್ರಯತ್ನಗಳೂ ನಡೆದಿಲ್ಲ.

ಕಸದ ಕುಪ್ಪೆಗಳು ನಗರದ ಬಡಾವಣೆಗಳಲ್ಲಿ ಎಲ್ಲೆಂದರಲ್ಲಿ ರೂಪುಗೊಳ್ಳುವುದು ಹಾಗೂ ಆ ಕಸದ ಆವಾರಗಳಲ್ಲಿ ನೀರು ನಿಂತು ಸೊಳ್ಳೆಗಳ ಸಂತಾನ ಹೆಚ್ಚುವುದು ಡೆಂಗಿ ಹೆಚ್ಚಳಕ್ಕೆ ಪೂರಕವಾಗಿದೆ. ಅಂದರೆ, ಡೆಂಗಿ ಉಲ್ಬಣಕ್ಕೆ ಕಸ ವಿಲೇವಾರಿ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದ ಪಾಲಿಕೆಯೇ ಕಾರಣವಾಗಿದೆ. ಈ ವರ್ಷದಿಂದ ಕಸ ಸಂಗ್ರಹ ಶುಲ್ಕವನ್ನು ಬಿಬಿಎಂಪಿ ಸಾರ್ವಜನಿಕರಿಂದ ಸಂಗ್ರಹಿಸುತ್ತಿದೆ. ಮುಂದಿನ ಸಾಲಿನಿಂದ ಸೊಳ್ಳೆ ನಿಯಂತ್ರಣ ಶುಲ್ಕವನ್ನು ಜಾರಿಗೆ ತರಬಹುದೇನೊ?

ಬಿಬಿಎಂಪಿ ಸೇರಿದಂತೆ ಸರ್ಕಾರದ ಅಂಗಸಂಸ್ಥೆಗಳು ನಾಗರಿಕ ಉತ್ತರದಾಯಿತ್ವದ ಬಾಧ್ಯತೆ ಮರೆತು ವರ್ತಿಸುತ್ತಿವೆ. ಆರೋಗ್ಯಕ್ಕೆ ಸಂಬಂಧಿಸಿದ ಬಿಕ್ಕಟ್ಟು ಎದುರಾದಾಗಲೆಲ್ಲ ಅಂಕಿಅಂಶ ಕಲೆಹಾಕುವುದು ಹಾಗೂ ಜನರಿಗೆ ಮುನ್ನೆಚ್ಚರಿಕೆ ನೀಡುವಷ್ಟಕ್ಕೆ ತಮ್ಮ ಹೊಣೆಗಾರಿಕೆ ಸೀಮಿತಗೊಳಿಸಿಕೊಂಡಿವೆ. ರಸ್ತೆಗಳಲ್ಲಿ ಮಳೆ ನೀರು ನಿಲ್ಲುತ್ತಿದ್ದರೆ ಅದರ ಹೊಣೆ ಯಾರದೆನ್ನುವುದರ ಬಗ್ಗೆ ಯಾರೂ ಯೋಚಿಸುವುದಿಲ್ಲ. ಮಳೆ ನೀರು ನಿಲ್ಲದಂತೆ ಮುಂಜಾಗರೂಕತೆ ವಹಿಸುವ ಬದ್ಧತೆ ಅಧಿಕಾರಿಗಳಿಗಿಲ್ಲ. ಡೆಂಗಿ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾದ ಪ್ರದೇಶಗಳಲ್ಲಿ ಔಷಧಿ ಸಿಂಪರಣೆಯೂ ನಡೆಯುವುದಿಲ್ಲ. ಚರಂಡಿ ಹಾಗೂ ಮೋರಿಗಳನ್ನು ಸುವ್ಯವಸ್ಥೆಯಲ್ಲಿಡಲು ವಿಫಲವಾಗಿರುವ ಆಡಳಿತವೂ ಸೊಳ್ಳೆಗಳ ರೂಪದಲ್ಲಿ ನಾಗರಿಕರನ್ನು ಕಾಡುತ್ತದೆ. ಯಾರ ನಂಬುವುದು ನಮ್ಮ ಹಿತ ಕಾಯುವರೆಂದು?

■ **ರಘುನಾಥ ಚ.ಹ.**

